ಕಿಯಾಸ್ಕ್‌ಗಳನ್ನು ಸ್ಥಾಪಿಸಲಾಗಿದೆ. ಹೋಬಳಿ ಮಟ್ಟದಲ್ಲಿ ಕಿಯಾಸ್ಕ್‌ಗಳನ್ನು ಸ್ಥಾಪಿಸುವ ಯೋಜನೆಯನ್ನು ಹಂತ ಹಂತವಾಗಿ ಕೈಗೊಂಡು ಯೋಜನೆಯ ಪ್ರಾರಂಭದ ದಿನಂಕದಿಂದ ಆರು ತಿಂಗಳ ಅವಧಿಯೊಳಗೆ ಕೊಡಗು ಜಿಲ್ಲೆಯ ಎಲ್ಲಾ ಹೋಬಳಿಗಳಿಗೂ ವಿಸ್ತರಿಸಲಾಗುವುದು.

ಆ) ಇಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

1026 (1221) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಖಾಸಗಿ ಜಮೀನಿನಲ್ಲಿ ಬಾಣೆ ಜಾಗವು ಸೇರಿದಂತೆ ಅದರಲ್ಲಿರುವ ಮರಗಳ ಮಾಲೀಕತ್ವದ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ:

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಬಾಣೆ ಜಾಗವು ಅರಣ್ಯ ಪ್ರದೇಶವಾಗಿದ್ದು ರೈತರ ತರಿ ಜಮೀನಿನ ಉಪಯೋಗಕ್ಕೆ ಬೇಕಾಗುವ ಸೊಪ್ಪು, ಸೌದೆ, ಕೃಷಿ ಉಪಕರಣಗಳನ್ನು ತಯಾರಿಸಲು ಮತ್ತು ಸ್ವಂತ ಉಪಯೋಗಕ್ಕೆ ಮರವನ್ನು ಉಚಿತವಾಗಿ ಪಡೆಯುವ ಸವಲತ್ತು (Privilege) ಮಾತ್ರ ವರ್ಗದಾರರಿಗೆ ಇರುತ್ತದೆ. ಇದರಲ್ಲಿ ಇರುವ ಮರಗಳು ಸರ್ಕಾರದ ಸೊತ್ತಾಗಿರುತ್ತದೆ.

ಆ) ಉದ್ಭವಿಸುವುದಿಲ್ಲ.

1027 (1222) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದ ಆದ ನಷ್ಟ ಎಷ್ಟು (ವಿವರ ನೀಡುವುದು)

ಆ) ನೆರೆ ಪರಿಹಾರ ಯೋಜನೆಯಡಿ ಈ ವರ್ಷ ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಎಷ್ಟು ಜನರಿಗೆ ಪರಿಹಾರ ಒದಗಿಸಲಾಗಿದೆ (ಕ್ಷೇತ್ರವಾರು ಮಾಹಿತಿ ನೀಡುವುದು)

ಈ) 2004–05ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಮಳೆ ಪರಿಹಾರ ಯೋಜನೆಯಡಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಯಾವ್ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಎಷ್ಟು ಜನರಿಗೆ ಪರಿಹಾರ ಒದಗಿಸಲಾಗಿದೆ (ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಉ) 2004–05ನೇ ಸಾಲಿನಲ್ಲಿ ಮಳೆ ಪರಿಹಾರ ಯೋಜನೆಯಡಿ ಕೊಟ್ಟ ಹಣವನ್ನು ವಾಪಸ್ ಪಡೆಯಲಾಗಿದೆಯೇ (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ಮೇ, ಜೂನ್ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದ ಆದ ನಷ್ಟ ರೂ. 783.97 ಲಕ್ಷ. (ತಾಲ್ಲೂಕುವಾರು ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ)

ಆ) 2006–07ನೇ ಸಾಲಿಗೆ ಇದುವರೆಗೆ ಕೊಡಗು ಜಿಲ್ಲೆಗೆ ರೂ. 110.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಅನುಬಂಧ–2ರಲ್ಲಿ ವಿವರಗಳನ್ನು ನೀಡಿದೆ.

ಈ) 2004–05ನೇ ಸಾಲಿಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಗೆ ರೂ. 180.60 ಲಕ್ಷ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ರಸ್ತೆ, ಸೇತುವೆ, ಕಟ್ಟಡ ಹಾಗೂ ಮೋರಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಗಿದೆ. ಸಂತ್ರಸ್ತರಿಗೆ ಪರಿಹಾರ ನೀಡಿದ ಕ್ಷೇತ್ರವಾರು ವಿವರಗಳನ್ನು ಅನುಬಂಧ–3 ರಲ್ಲಿ ನೀಡಿದೆ.

ಉ) 2004–05ನೇ ಸಾಲಿನಲ್ಲಿ ಮಳೆ ಪರಿಹಾರ ಯೋಜನೆಯಡಿ ಕೊಟ್ಟ ಹಣವನ್ನು ವಾಪಸ್ ಪಡೆದಿರುವುದಿಲ್ಲ.

ಅನುಬಂಧ-1

2006 ಜನವರಿಯಿಂದ ಜೂನ್ ತಿಂಗಳವರೆಗೆ ಮಳೆ ಹಾನಿಯಿಂದ ಉಂಟಾದ ನಷ್ಟದ ವಿವರಗಳು

ತಾಲ್ಲೂಕು	ಬೆಳೆಹಾನಿ ವಿಸ್ತೀರ್ಣ	ಅಂದಾಜು ನಷ್ಟ	ಪರಿಹಾರ ನೀಡಿದ ಮೊತ್ತ (ರೂ. ಲಕ್ಷ)	ಜಾನುವಾರು ಹಾನಿ	ಪರಿಹಾರ ನೀಡಿದ ಮೊತ್ತ	ಪ್ರಾಣಹಾನಿ	ಪರಿಹಾರ ನೀಡಿದ ಮೊತ್ತ	ಮನೆಹಾನಿ	ಪರಿಹಾರ ನೀಡಿದ ಮೊತ್ತ
ಮಡಿಕೇರಿ	ಕೃಷಿ 62.26 ಹೆಕ್ಟೇರ್ (146 ಪ್ರಕರಣ)	5.23	0.137	1	0	7	3.50	27	0.465
	ತೋಟಗಾರಿಕೆ 9.82 ಹೆ. (19 ಪ್ರಕರಣ)	0.74	0.151						
ಸೋಮವಾರ ಪೇಟೆ	ಕೃಷಿ 82 ಹೆಕ್ಟೇರ್ (150 ಪ್ರಕರಣ)	1.64	–	0	0	0	0	12	0.384
	ತೋಟಗಾರಿಕೆ – ಇಲ್ಲ	–	–						
ವಿರಾಜಪೇಟೆ	ಕೃಷಿ – ಇಲ್ಲ	–	–	0	0	0	0	65	1.636
	ತೋಟಗಾರಿಕೆ 11 ಹೆಕ್ಟೇರ್ (60 ಪ್ರಕರಣ)	10.50	0.566						
ಒಟ್ಟು	165.08 ಹೆಕ್ಟೇರ್ (375 ಪ್ರಕರಣ)	18.11	0.854	1	0	7	3.50	104	2.490

ಅನುಬಂಧ–2

2004–05ನೇ ಸಾಲಿನಲ್ಲಿ ಪರಿಹಾರ ನೀಡಿದ ಕ್ಷೇತ್ರವಾರು ವಿವರ

ಮಡಿಕೇರಿ	184 ಸಂತ್ರಸ್ತರು	41.4200.00 ಲಕ್ಷ
ಸೋಮವಾರ ಪೇಟೆ	453 ಸಂತ್ರಸ್ತರು	597930.00 ಲಕ್ಷ
ವಿರಾಜಪೇಟೆ	149 ಸಂತ್ರಸ್ತರು	276000.00 ಲಕ್ಷ

ಅನುಬಂಧ–3

ಮಳೆಹಾನಿ ದುರಸ್ತಿ ಕಾಮಗಾರಿಗಳ ವಿವರ

ತಾಲ್ಲೂಕು	ಕ್ರಿಯಾ ಯೋಜನೆ ಅನುಮೋದಿತ ಕಾಮಗಾರಿಗಳ ಸಂಖ್ಯೆ		ಅಂದಾಜು ಮೊಬಲಗು (ರೂ. ಲಕ್ಷಗಳಲ್ಲಿ)		ಬಿಡುಗಡೆಗೊಳಿಸಿದ ಅನುದಾನ		ಬಿಡುಗಡೆಗೊಳಿಸಿದ ಆಹಾರ ಧಾನ್ಯ (ಮೆಟ್ರಿಕ್ ಟನ್‌ಗಳಲ್ಲಿ)
	ಇ.ಇ. ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ವಿಭಾಗ ಮಡಿಕೇರಿ	ಇ.ಇ. ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ ಮಡಿಕೇರಿ	ಇ.ಇ. ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ವಿಭಾಗ ಮಡಿಕೇರಿ	ಇ.ಇ. ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ ಮಡಿಕೇರಿ	ಇ.ಇ. ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ವಿಭಾಗ ಮಡಿಕೇರಿ	ಇ.ಇ. ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ ಮಡಿಕೇರಿ	ಇ.ಇ. ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ವಿಭಾಗ ಮಡಿಕೇರಿ
ಮಡಿಕೇರಿ	50	21	58.83	14.20	42.18447	14.14247	
ಸೋಮವಾರ ಪೇಟೆ	80	01	100.45	01.95	66.94663	01.95	
ವಿರಾಜಪೇಟೆ	71	25	59.31	22.75	28.16314	22.75	
ಒಟ್ಟು	**201**	**47**	**218.59**	**38.90**	**137.29424**	**38.84247**	**585.614**